'ಬರಕೊಳ್ಳಿ... ಎಸ್. ಸದಾಶಿವ, ನಂ. 112, 26ನೇ ಮುಖ್ಯರಸ್ತೆ, ಟಾಟಾ ಸಿಲ್ಕ್‌ಫಾರಂ, ಬಸವನಗುಡಿ, ಬೆಂಗಳೂರು–560 004' ಎಂದು ಚಕಚಕನೆ ತಮ್ಮ ಮನೆಯ ವಿಳಾಸ ಹೇಳಿದರು.

'ಸರಿ! ಈ ಕೂಡಲೇ ಕಳುಹಿಸಿಕೊಡುತ್ತೇವೆ.'

ಪೊಲೀಸ್ ಸಿಬ್ಬಂದಿ ಬರುವಷ್ಟರಲ್ಲಿ ಸದಾಶಿವ ತಾಳ್ಮೆಗೆಟ್ಟು, ಅಸಹನೆಯಿಂದ ಮತ್ತೊಮ್ಮೆ ಪೊಲೀಸರಿಗೆ ಫೋನ್ ಮಾಡಿದರು.

ಅರ್ಧ ಗಂಟೆಯಲ್ಲೇ ಹಾಜರಾದ ಪೊಲೀಸ್ ಇನ್‌ಸ್ಪೆಕ್ಟರ್ ಮತ್ತು ಒಬ್ಬರು ಪೇದೆ, ರಂಧ್ರವಾಗಿದ್ದ ಕಿಟಕಿಯ ಗಾಜು ಮತ್ತು ಗೋಡೆಗೆ ನೆಟ್ಟಿದ್ದ ಎರಡು ಗುಂಡುಗಳನ್ನು ಪರಿಶೀಲಿಸಿ ಅಂದರು, 'ನಿಮ್ಮ ಮೇಲೆ ಯಾರೋ ಗುಂಡು ಹಾರಿಸಿದ್ದಾರೆ.'

